# ವಾದೀಭಸಿಂಹನ ಇತಿವೃತ್ತ

## ಶಾಸನಗಳ ಬೆಳಕಿನಲ್ಲಿ

ಸಂಸ್ಕೃತದಲ್ಲಿ ರಚಿಸಲಾಗಿರುವ ಕ್ಷತ್ರಚೂಡಾಮಣಿ (ಜೀವಂಧರಚರಿತೆ). ಗದ್ಯ ಚಿಂತಾಮಣಿ (ಜೀವಂಧರ ಚರಿತೆ ),ಸ್ಯಾಕಷ ಪ್ರ ಚಾರ ಪಡೆದಿವೆ. ಈ ಕಾವ್ಯ ಹಾಗೂ ಶಾಸ್ತ್ರ ಗ್ರಂಥಗಳನು ಕುರಿತು ವಿಮರ್ಶಿಸುವುದು ಈ ಸಂಪ್ರಬಂಧದ ಉದೇಶವಲ್ಲ. ಕೃತಿಕಾರ ಮತ್ತು ಕೃತಿಕಾರನ ಕಾಲ ಕುರಿತ ಪರಾಮರ್ಶೆಯಷ್ಟ ಈ ಸಂಪ್ರ ಬಂಧದ ಆಶಯ.

ಬಹಳ ಹಿಂದೆಯೇ ಈ ಕ್ಷತ್ರ ಚೊಡಾಮಣಿಯನ್ನು ಸಂಪಾದಿಸಿ ಪ್ರಕಟಿಸಿದ ಶಾಂತಾರಾಜೈಯ್ಯ ನವರು ಪೀಠಿಕೆಯಲ್ಲಿ ಬರೆದಿರುವುದಿಷ್ಟ: ಶ್ರೀಮದ್ವಾದೀಭ ಸಿಂಹ ಸೂರಿ ಮಹಾಕವಿಯಿಂದ ವಿರಚಿತವಾದ ಜೀವಂಧರ ಚರಿತಾ ರೂಪವಾಗಿರುವ ಕ್ಷತ್ರ ಚೂಡಾಮಣಿ ಎಂಬೀಮಹದ'ಂಥವು ಸಂಸ್ಕೃತ ಭಾಷೆಯಲ್ಲಿರುವುದನ್ನು ಕೆಲವರಾದ ಮತಾಭಿಮಾನಿಗಳಿಂದ ಪ್ರೇರಿತನಾಗಿ ಗೀರ್ವಾಣ ಭಾಷಾ ಪರಿಚಯವಿಲ್ಲದವರಿಗೂ ಬಾಲಕರಿಗೂ ಸಹಾಸುಲಭವಾಗಿ ತಿಳಿಯುವಂತೆ ಮೂಲ ಟ್ಟೀಕು ತಾತರ್ಯ ಮತ್ತು ವಿಶೇಷ ವಿಷಯಗಳೊಂದಿಗೆ ಬಹಳ ದ್ರವ್ಯವ್ರಯದಿಂದಲೂ, ಪಂಡಿತ ಸಹಾಯದಿಂದಲೂ,ಒಳೆ ಕಾಹದದಿಂದಲೂ ಮುದ್ರಾ ಪಿಸಿ ಪ್ರಚುರ ಮಾಡಲಕ್ಷಿದೇನಾದುದ ರಿಂದ ತಾವು ತಮ್ಮ ಮಿತ್ರ ಮಂಡಲಿಗೆ ಪ್ರೋತ್ಸಾಹಿಸಿ ಪುಸಕಗಳನ್ನ ತರೆಸಿ,ನೋಡಿ ,ಆನಂದಿಸುವಿರಿ ಎಂದು ನಂಬಿ ಇಥೆನೆ [ಶಾಂತರಾಜೈಯ್ಯ್; ೧೯೦೦:ಪೀಠಕೆ]. ೧೯೦೦ ರಲ್ಲಿ ಪೀಠಕೆಯನ್ನ ಹೇಗೆ ಬರೆಯುತ್ತಿದ್ದರೆಂಬ ಭಾಷೆ ಶೈಲಿ ನಿರೂಪಣಗೊಂದು ಮಾದರಿಯಾಗುವುದರ ಹೊರೆತು ಇದರಲ್ಲಿ ಪ್ರ ಸುತ್ತ ಸಂಪ್ರಬಂಧದಲ್ಲಿನ ಕವಿಯ ಇತಿವೃತ್ತ್ ಚರ್ಚೆಗೆ ನೆರವಾಗುವ ಯಾವೊಂದು ಅಂಶವೂ ಇಲ್ಲ.

ಇನ್ನೊಬ  ಸಂಪಾದಕರು ಇದೇ ಕ್ಷತ್ರಚೂಡಾಮಣಿಯ ಹೊಸ ಆವೃತ್ತಿಯನ್ನು ಹೊರತಂದರು [ಶ್ರೀ ಕಾಂತ ಭುಜಬಲಿ ಶಾಸ್ತ್ರಿ : ೧೯೭೪]. ಅದರಲ್ಲಿ ಕೆಲವು ಮಾಹಿತಿಗಳಿವೆ : ಕವಿಯು ಜನ್ಮ ಹೆಸರು ಅಜಿತಸೇನ ಮತ್ತು ಪಾಂಡಿತ್ಯದಿಂದ ಉಂಟಾದ  ಉಪಾಧಿಯೆವ ವಾಧೀಭಸಿಂಹ ಸೂರಿ; ಈ ಕವಿಯು ಪುಷ್ಪ ಸೇನ ಮುನಿಯು ಶಿಷ್ಯ, ಜನ್ಮ ಸ್ಥಾನ ಸಷ್ಟಿವಿಲ್ಲ, ತವಿಳು ನಾಡಿನ ಪೋಲೂರು ತಾಲೂಕಿನ ತಿರುಮಲೈ ಇರಭೇಕು ಹೊಂಬುಜ ಕ್ಷೇತ್ರವು ಇವರ ಧರ್ಮ–ಸಾಹಿತ್ಯ ಪ್ರಚಾರರದ ಪ್ರಧಾನ ಕೇಂದ್ರ;ತರ್ಕ ವ್ಯಾಕರಣ ಛಂದಕಾವ್ಯ ಅಲಂಕಾರಕೋಶ ಶಾಸ್ರ್ತಗಳಲ್ಲಿ ಪಾಂಡಿತ್ಯವಿದ್ದು ವಾದಿತ್ವಗುಣದಿಂದ 'ವಾಧೀಭಸಿಂಹ' ಪ್ರಶಸ್ತಿಪ್ರಾಪ್ತ ವಾಗಿತ್ತು; ರಾಜುಗುರುಗಳು ಇವರ ಪರಮ ಭಕ್ತರು. ಶ್ರವಣಬೆಳೆಗೊಳದ ಮಲ್ಲಿಶೋಣಾ ಪ್ರಶಸ್ತಿ ಶಾಸನದಿಂದ ಇವರಿಗೆ ಶಾಂತಿನಾಥ ಪದ್ಮನಾಭ ಎಂಬ ಶಿಷ್ಯರಿದ್ದಂತೆ ತಿಳಿದು ಬರುತ್ತದೆ. ಪೊಂಬುಜದ ಕ್ರಿ.ಶ ೧೧೪೭ ಸ್ತಂಭ ಲೇಖದಿಂದ, ಇವರಿಗೆ ತೈಲ ಸಾಂತರನ ಸುಪುತ್ರಿ, ಮಹಾ ವಿದುಷೀಮಣಿ ಪಂಪಾದೇವಿಯ ಶಿಷ್ಯಳಾಗಿದ್ದಳು [ಶ್ರೀಕಾಂತ ಭುಜಬಲಿಶಾಸ್ತ್ರೀ:೧೯೭೪;೧]

ಕ್ಷತ್ರ ಚೂಡಾಮಣಿ, ಗದ್ಯ ಚಿಂತಾಮಣಿ, ಸ್ಯಾದ್ವಾದ ಸಿದ್ದಿ ಮೊದಲಾದ ಕೃತಿಗಳ ಕರ್ತೃ ಹಾಗೂ ರಿಷಿ ವಾದೀಭಸಿಂಹನ ಇತಿ ವೃತ್ತ ಕುರಿತ ವಾಗ್ವಾದಕ್ಕೆ ಜೀವ ಕೊಟ್ಟವರು ಸಿದ್ದಾಂತಚಾರ್ಯ ವಿದ್ಯಾಭೂಷಣ ಪಂಡಿತ ಕೆ. ಭುಜಬಲಿ ಶಾಸ್ತ್ರಿ ಯವರು. ಅವರು ವಾದೀಭಸಿಂತಹನ ಕೃತಿಗಳು ಹಾಗೂ ಕಾಲದ ಚರ್ಚೆಗೆ ಒದಗುವ ಮೂಲ ಆಕರಗಳತ್ತ ಬೆರಳಿಟ್ಟರು ಮತ್ತು ಪ್ರೌಢ ಸಂಶೋಧನ ಲೇಖನವನ್ನು ಬರೆದರು [ಭಜಬಲಿ ಶಾಸ್ತ್ರೀ, ಕೆ:೧೯೭೧ –ಭಿ] ಆ ವೇಳೆಗಾಗಲೆ ತಮಿಳಿನಲ್ಲಿ ಟಿ.ಎಸ್. ಕುಪ್ಪುಸ್ವಾಮಿ ಶಾಸ್ತ್ರಿಯವರು ಈ ಕವಿಯ ವಿಚಾರವಾಗಿ ಕೆಲವು ಮಾಹಿತಿಗಳನ್ನು ಹೊರಗೆಡವಿದ್ದರು [ಕುಪ್ಪುಸ್ವಾಮಿಶಾಸ್ತ್ರಿ, ಟಿ.ಎಸ್.೧೯೦೨] ಜತೆಗೆ ಹಿಂದಿಯಲ್ಲಿ ದರಬಾರಿಲಾಲ ಕೋಠಿಯವರೂ ಕೆಲವು ಸಹಾಯಕ ಸಾಮಗ್ರಿಯನ್ನು ತೆರೆದಿಟ್ಟರು [ಕೋಠಿ, ದರಬಾರಿ ಲಾಲ: ೧೯೫೫ (?)]. ಹಿಂದಿಯಲ್ಲಿ ಬರೆದಿರುವ ಮೌಲಿಕ ಸಂಶೋಧನ ಗ್ರಂಥದಲ್ಲಿ ನಾಥೂರಾಮ ಪ್ರೇಮಿಯವರು ಕೂಡ ವಾದೀಭಸಿಂಹ ,ಅವನ ಕೃತಿಗಳು ,ಕರ್ತೃತ್ವ, ಕಾಲ ಕುರಿತು ಚರ್ಚಿಸಿದಾರೆ

[ನಾಥೂರಾಮ ಪ್ರೇಮಿ: ೧೯೫೬]. ತಮ್ಮ ಮತ್ತು ಇತರರ ಚರ್ಚೆಗಳೆಲ್ಲದರ ಸಾರವನ್ನು ಆಳವಡಿಸಿಕೊಂಡು ಭುಜಬಲಿ ಶಾಸ್ತ್ರಿಗಳು ವಾದೀಭಸಿಂಹನ ಜೀವನ –ಸಾಧನೆಯನ್ನು ಅವಲೋಕಿಸಿದ್ದಾರೆ [ಭುಜಬಲಿ ಶಾಸ್ತ್ರಿ ಕೆ: ೧೯೭೧–ಎ;೧೧೭–೨೩].

ಇಷ್ಟೆಲ್ಲಾ ಚಿಂತನ– ಮಂಥನ ನಡೆದಿದ್ದರೂ, ವಾದೀಭಸಿಂಹನು ಇವರೆಲ್ಲ ಬಲ್ಲಿದರ ಬಲೆಯಿಂದ ನುಣುಚಿಕೊಂಡಿದ್ದಾನೆ; ಇತಿವೃತ್ತ ರಚನೆಯನ್ನು ಕೆಲವು ಸೂಕ್ಷ್ಮಗಳ ಸ್ಫೋಟವಾಗದೆ ರಹಸ್ಯವಾಗಿಯೇ ಉಳಿದಿವೆ ಶಾಸನಗಳ ಬೆಳಕಿನಲ್ಲಿ ವದೀಭ ಸಿಂಹನನ್ನು ನಿಲ್ಲಿಸುವ ಪ್ರಯತ್ನ ನನ್ನದು. ಹಾಲಿ. ವಾದೀಭಸಿಂಹನ ವಿಚಾರದಲ್ಲಿ ಇರುವ ಸಿಕ್ಕುಗಳು ಮೂರು;

೧. ವಾದೀಭಸಿಂಹನ ಹೆಸರುಗಳಲ್ಲಿ ರುವ ಗೊಂದಲ

೨. ಜಾಲವಿಚಾರ ಸಮಸ್ಯ

೩. ಸ್ಥ್ ಳಯಾವುದೆಂಬ ಚರ್ಚೆ

ಈ ಮೂರು ಗಂಟುಗಳನು ಒಂದೊಂದಾಗಿ ಪರಿಶೀಲಿಸಿ, ಸಮಂಜಸವಾದ ಪರಿಹಾರವನ್ನು ಕಾಣಲು ಶಾಸನಗಳನ್ನು ಅವಲಂಬಿಸಬೇಕು,ವಾದೀಭ ಸಿಂಹ ಎಂಬ ಹೆಸರು ಬಹಳ ಜನ ಜೌನಾಚಾರ್ಯರಿಗೆ ಅನ್ವಯವಾಗಿದೆಯೆಂಬುದು ಶ್ರವಣಬೆಳಗೊಳ ಮತ್ತು ಹೊಂಬುಜ ಶಾಸನಗಳನ್ನು ನೋಡಿದರೆ ಸ್ಪಷ್ಟವಾಹುತ್ತೆದೆ. ಅಲ್ಲದೆ ವಾದಿಬಸಿಂಹ ಎಬುದು ಯರೊಬ್ಬಾರ ಇಟ್ಟ ಹೆಸರೂ ಅಲ್ಲ, ಅದುಬೇರೆ ಬೇರೆ ಮುನಿಗಳಿಗೆ ಕಿಟ್ಟ ಒಂದು ಬಿರಿದು:

೧ ಸಮಂತ್ರಭದ್ರದೇವರಿಗೂ ವಾದಿಸಿಂಹ ಎಂಬ ಫ್ರಶಸ್ತಿಯಿತ್ತೆಂಬುದನ್ನು ಶಾಸನಗಳು ತಿಳಿಸಿವೆ:

ಎ.ಕ೨, (ಪ) ೭೧ (೬೪) ೧೬೩ ಪು.೨೭

೨.        ೯೨೧೯.

೩        ಅಜಿತಸೇನಮುನಿಗೂ ಈಪ್ರಶಸ್ತಿಯಿತ್ತು :ಅದೇ , ೭೭(೬೭) ೧೧೨೯. .ಪು ೪೭

೪. ಅಕಳಂಕದೇವನಿಗೂ ಈಬಿರುದು ಇತ್ತು :ಅದೇ ,೫೪೯, ೧೧೨೪.ಪು. ೩೫೩

ಇದೇ ರೀತಿಯಾಗಿ ವಾದೀಭಸಿಂಹ ಎಂಬ ಪ್ರಶಸ್ತಿ ಯು ಅಜಿತ ಸೇನಮುನಿಗೂ, ಒಡೆಯ ದೇವನೆಂಬ ಮುನಿಗೂ ಇದ್ದುದನು ಹೊಂಬುಜ ಶಾಸನಗಳು ದಖಲಿಸಿವೆ. ,ವಾಾದಗಳಲ್ಲಿ ನಿಪ್ಣಾತರಾದ ಕೆಲವು ಮುನಿಗಳಿಗೆ ವಾದಿಭಸಿಂಹ, ವಾಧೀಘರಟ್ಟ ಎಂಬ ಪ್ರಶಸ್ತಿಗಳಿದುವು ಇದೆ ರೀತಿ ಒಡೆಯದೇವ ಮುನಿಗೂ, ಅಜಿತಸೇನ ಮುನಿಗೂ 'ವಾದೀಭಸಿಂಹ' ಎಂಬ ಪ್ರಶಸ್ತಿಇದ್ದುದನ್ನು ಹೊಂಬುಜದ ಶಾಸನಗಳು ದಾಖಲಿ ಸಿವೆ, ಪ್ರಸುತ್ತ ಜಿಜಾಸೆಗೆ ಈ ಹೊಂಬುಜ ಶಾಸನಗಳು ಸಹಾಯಕ ಸಾಮುಗ್ರಿಯನ್ನು ಪೊರೆಸುತ್ತೆವೆ. ಗದ್ಯ ಚಿಂತಾಮಣಿ ,ಕ್ಷತ ಚೊಡಾಮಣಿ ಮೊದಲಾದ ಗ್ರಂಥಗಳ ಕರ್ತೃವಾದ ವದೀಭಸಿಂಹನೂ ಒಡೆಯದೇವನೂ, ಅಜಿತಸೆನ ಮುನಿಯೂ ಬಬ್ಬನೆ ಆಗಿದ್ದಾನೆಂದು ನಾಥರಾಮಪ್ರೆಮಿಯವರೂ [೧೯೫೬]. ಪಂಡಿತಕೆ. ಭುಜಬಲಿಶಾಸ್ತ್ರಳೂ [೧೯೭೧– ಎಮತ್ತು ೧೯೭೧ –ಬಿ] ಶ್ರೀಕಾಂತ ಭುಜಬಲಿ ಶಾಸ್ತ್ರಿಯವರೂ[೧೯೭೪] ಅಭಿಪಾಯ ಪಟ್ಟಿದ್ದಾರೆ. ಆದರೆ ಬಿ,ಎ. ಸಾಲೆತೊರೆಯವಯು ಗದ್ಯ ಚಿಂತಾಮಣಿಯ ಕರ್ತೃವಾದ ಅಜಿತಸೇನನೂ ಚಾವುಡರಯನ [ಕ್ರಿ. ಶ.೯೭೮] ಗುರುವಾದಾ ಅಜಿತಸೇನ ಮುನಿಯೂಅಬಿನ್ನರೆಂದಿದಾರೆ. [ಸಾಲೆತೊರೆ ,ಬಿ ಎ. ;೧೯೩೮:೫೦]. ಎಲ್ಲ ಸೂರಿಗಳೂ ಚರಿತ್ರಕಾರರೂ ಒಡೆಯದೇವ ವಾದೀಬಸಿಂಹನನ್ನು ಸರಿಯಾಗಿಗುರುತಿಸಲು ಹೇಗೆ ವಿಫಲರಾಗಿದ್ದಾರೆಂಬುದನ್ನು ಹೊಂಬುಜದ ಶಾಸನಗಳ ಅದ್ಯನಯನ ತೋರಿಸುತ್ತದೆ.

ಒಡೆಯದೇವ ಎಂನುದುಬ್ಬದೀಸಿಂಹನ ಮೂಲ ಹೆಸರು. ಈತನಿಗೆ ಒಡೆಯದೇವ ವಾದೀಭಸಿಂಹ ಎಂಬೆರಡು ಹೆಸರುಗಳೂ ಇದ್ದುವು. ಒಡೆಯದೇವನು ಹೀಗೆ ಬಹುನಾಮರೂಪಿಯಾಗಿ ಶಾಸನಗಲಲ್ಲಿ ಕಾನಸಿಕೊಂಡಿರುವುದರಿಂದ ಇವೆಲ್ಲವೂ ಬಬ್ಬನೇ ಯತಿಯ ಹೆಸರುಗಳೆಂದು ಗುರುತಿಸುವುದರಲ್ಲಿ ವಿದ್ಯಾಂಸರಿಗೆ ತೊಡಕಾಗಿದೆ.

ಗಂಗರ ಅರುಳಿದೇವನ (ಹೆಂ ಗಾವಬ್ಬರಸಿ) ಹಿರಿಯ ಮಗಳು ಚಟ್ಟಲದೇವಿ;ರಕ್ಕಸಗಂಗ (ಗೋವಿಂದರದೆವ )ನು ಈಕೆಯ ದೊಡ್ಡಪ್ಪ ಹಾಕು ಸಾಕಿ ಬೆಳೆಸಿದವನ್ನು .ಛಂದೋಂಬುಧ್ಧಿಯನ್ನು ರಚಿಸಿದ ನಾಗವರ್ಮನು ಈತನ ಆಶ್ರಯ ದಲ್ಲಿದ್ದ್ದವನುತನ್ನ ಗಂಡನಾದ ಕಾಡುವೆಟ್ಟಿಯ ಮರಣಾನಂತರ ಚಟ್ಟಲದೇವಿಯು ಪೊಂಬುಚ್ಚಪುರದಲ್ಲಿ ನೆಲಸಿದಳು. ಅಕೆಯತಂಗಿ ಕಂಚಲದೇವಿಯು ನಾಲ್ಕುಜನ ಮಗಂದಿರನ್ನು ಹೆತ್ತು ಸತ್ತುಹೋಗಿದ್ದಳು.ಅದರಿಂದತನ್ನ ತಂಗಿಯ ಮಕ್ಕಳನ್ನು ಈದೊಡ್ಡಮ್ಮ ಚಟ್ಟಲ ದೇವಿಯು ಸಾಕಿಬೆಲಸಿದಳು. ಚಟ್ಟಲದೆವಿಗೆ. ಸಾಕಿ ಬೆಳೆಸಿದ ನಾಲ್ವರು ಮಕ್ಕಳಿಗೆ ರಾಜಗುರುಗಳು ಈ ಒಡೆಯದೇವ;

ಚಟ್ಟಲದೇವಿಯುಂ ಭುಜಬಳ ಶಾನರ ದೆವನುಂ ನನ್ನಿಶಾನರ
ದೇವನುಂ ವಿಕ್ರಮಶಾನರದೇವನುಂ ಬರ್ಮದೆವನುಂ
ತನೆಲ್ಲರುಂ ಒಡೆಯದೇವರ ಗುಡ್ಡುಘಲಪ್ಪಕಾರಣದಿಂದಂ
ದ್ರವಿಳ ಸಂಘದ ನಂದಿಗಣದರುಂಗಳಾನ್ವಯದ
ಶ್ರೀವಿಜಯದೇರ ನಾಮೋಚ್ಚಾರನಂಗೆಯ್ದವರ
ಶಿಷ್ಯೆರು ಶ್ರೇಯಂಸ ಪಂಡಿತರಿಂದುವ್ವಿ ೯
ತಿಳಕಮೆನಿಸಿದ ಪಂಚವಸದಿಗೆ
ಸುಭಮುಗೊರ್ತ್ತದೊಳಾಚಂದ್ರಾರ್ಕ್ಕ
ಸ್ಥಾ ಯಿಯಪ್ಪಂತುನ್ನ ತಮಪ್ಪೆಡೆಡೆಯೊಳ

ಕೆಸರ್ಕ್ಕಲಿಕ್ಕಿಸಿದರು॥

ವಿಜಯದೇವನೆಂಬ [ಹೋಂಬುಜ ೨(ಲನಗರ ೩೬)೧೦೭೭. ಸಾಲು:೯೩-೧೦೨] ಹೆಸರಿನ ಒಡೆಯದೇವನು ದ್ರವಿಲ ಸಂಘದ ನಂದಿಗಣದ ಅರುಂಗಳ ಅನ್ವಯಕ್ಕೆ ಸೇರಿದನು: ಈ ಸಂಗತಿಯನ್ನು ಹೊಂಬುಜದ ಒಂದನೆಯ ಶಾಸನವೂಪುಷ್ಟೀಕರಿಸಿದೆ;

ಅನ್ತು ಪೊಗುರ್ತ್ತೆಗಂ ನೆಗೆರ್ತೆಗಂ ನೆಲೆಯೆಸಿದ ಚಟ್ಟಲ ದೇವಿಯುಂ ನನ್ನಿ ಶಾನ್ತರು ವೊಡೆಯದೇವರ ಗುಡ್ಡುಗಳು ಕರಣದಿಂಶ್ರೀ ಮತ್ತಿಯಂಗುಡಿಯ ನಿಡುಂಬಱು ತೀರ್ಸ್ಥದ ರುಂಗಳಾಸ್ವಯದ ಸಂಬಂಧದ ನನ್ದಿಗಣಾದೀಶ್ವರರೆನಿಸಿದ ಶ್ರೀವಿಜಯಭಟ್ಟಾರಕರ ನಾಮೋಚ್ಚಾರಣದಿ ಶುಭಕರಣ ತಿಥಿ ಮೂಹೂತ್ತದಲವರ ಶಿಷ್ಯರ್ಶ್ರ್ಶ್ರೇಯಾಸ ಪಣ್ಡಿತರುವ್ವಿ ತಿಳಕಮೆನಿಸಿದ ಪಚವಸದಿಗುತಮಪೇದ್ದೇ ಯಲ್ಕರುವೆನಿಸೆ ಕೆಸಕ್ಕೆಲ್ಲಿಕ್ಕಿದರ್ ॥ [ಹೊಬುಜ೧(ಲನಗರ೩೫) ೧೦೭೭ಸಲು : ೬೭-೬೮]

ಶ್ರೀಮದ್ರವಿಳಸಂಘದ ಅರುಂಗಳಾನ್ವಯದ ಪ್ರಾಸ್ತಾಪ ಶಾಸನಗಳಲ್ಲಿ ಅನ್ಯತ್ರವೂ ಇದೆ (ಎ ಕ ೬, ಕಡೂರು .೬೯.೧೧೬೦ಸಾಲು೨೬:ಎ.ಕ.೨(ಪ) ೫೬೯(೫ ಚ.ಪ.೧೪೯)೧೧೨೪.ಚಲ (ಶಲ್ಯ) ಪು, ೩೫೨. ಸಾಲು;೧೬]. ಶ್ರವಣ ಬೆಳಗೊಳದ ಶಾಸಕ್ಕೊ, ಒಡೆಯದೇನ ಮತ್ತು ಅರುಂಗಳಾನ್ವಯದ ಆಚಾರ್ಯಾವಳಿ (ಗಾರ್ವಾವಳಿ) ಹೊಂದಾಣಕೆಯಿದೆ. ಒಡೆಯದೇವನ ಗುರುಪರಂಪರೆ,

ಕನಕಸೇನ (ವಾದಿರಾಜ 1)ಭಟಾರಕ

ದಯಾಪಾಳದೇವ।

ಪುಷಶೇಣ ಸಿದ್ದಾನ್ತದೇವ।

ಜಗದೆಕಮಲ್ಲವಾದಿರಾಜ ದೇವ

ಶ್ರೀವಿಜಯ ಭಟ್ಟಾರಕ

(ಒಡೆಯದೇವ –ವಾದೀಭಸಿಂಹ)

ರಚಮಲದೇವಂಗೆ ಗುರುಹಳೆನಿಸಿದ ಕನಕಸೇನಭಟ್ಟಾರಕರವರ ಶಿಷ್ಯರ ಶಬ್ದಾನುಶಾಸನಕ್ಕ ಫ್ರತಿಕ್ರಿಯೆಉಎಂದು ರೂಪಸಿದ್ದಿಯಂಮಾಡಿದ ದಯಾ ಪಾಲದೇವರುಂಪುಷ್ಪೆಷೇಣ ಸಿದ್ದಾನ್ತದೇವರುಂ.. . . . ಜಗದೇಕ ಮಲವಾದಿಯು ಮೆನಿಸಿದವಾದಿರಾಜದೇವರುಂ ರಕ್ಕಸಗಂಗ ಪೆರ್ಮ್ಮನಡಿಗಳ ಚಟ್ಟಲದೇವಿಯ ಬೀರದೇವರನನ್ನಿಶಾನ್ತರನ ಗುರುಗಳನಿಸಿದ .. ಶ್ರೀವಿಜಯ ಭಟ್ಟಾರಕರುಮವರ ಶಿಷರ್.. ಗುಣಸೇನದೇವರ ದಯಾಪಳ ದೇವರ್ಕಮಳಭದ್ರರಜಿತಸೇನ ಪಣ್ಡಿತದೇವರ ಶ್ರೇಯಾಂಸ ಪಣ್ಡಿತರ್[ಹೊಂಬುಜ೧.ಸಾಲು :೭೫–೭೬ ,೭೯–೮೦]

ಶ್ರೀವಿಜಯಭಟಾರಕರೆನಿಸಿದ ಪ್ಡೆಯದೇವನಿಗೆ ಶ್ರಾವಕ ಶಿಷ್ಯಸಂಪತ್ತು ಹೀಗಿತ್ತು;ರಕ್ಕೆಸಗಂಗ ಪೆರ್ಮಾನಡಿ. ಚಟಲ ದೇವಿ, ಬೀರದೇವ (ತ್ರೈಳೋಕ್ಯ ಮಲ್ಲ ವೀರಸಾಂತರದೆವ),ನನ್ನಿಸಾಂತರ ದೇವ ತೃಲಪ ಭುಜಬಳಸಾಂತರ ದೇವ ,ಒಡ್ಡುಗ ವಿಕ್ರಮ ಸಾಂತರದೇವ ಮತ್ತು ಬರ್ಮದೆವ. ಒಡೆಯ ದೆವ,(ಶ್ರೀವಿಜಯ ಭಟ್ಟಾರಕ)ನಿಗೆ ಇದ್ದ ಮುನಿಶಿಷ್ಯವೃಂದ; ಗುಣಸೇನದೇವ,ದಯಾಪಾಳ ,ಕಮಳಭದೇವ .ಅಜಿತಸೇನ ಪಂಡಿತದೆವ ಮತ್ತು ಶ್ರೇಯಾಂಸ ಪಂಡಿತ

ವಿನುತಶ್ರೀವಿಜಯರ್ (ಹೊಂಬುಜ ೧ಸಾಲು;೬೪) ಗುರುಗಳಾಗಿರುವ ಶಿಷ್ಯರು ಹೆಮ್ಮೆ ಪಟ್ಟಿದ್ದಾರೆಂದು ಇದೇ ಶಾಸನ(ಸಾಲು ;೬೩) ಹೇಳಿದೆ.

ಶ್ರೀವಿಜಯ ದೇವರುಗ್ರ ತ

ಪೋವಿಬವರ್ಗ್ಗುರುಗಲಖಿಳ ಶಾಸ್ತ್ರಾಗಮಸಂ

ಭಾವಿತಜ್ಞೈನಿಸಲ್ ಚಟ್ಟಲ

ದೆವಿಯೆ ಕ್ರಿತ ಪುಣ್ಯವನ್ತೆ ವಿಶ್ವಂಬರೆಯೊಳ॥

ಶ್ರೀವಿಜಯದೇವ (ಒಡೆಯದೇವ)ನಿಗೆ ಹಿರಿಯ ಗುರುಗಳು ಕನಕಸೇವ –ವಾದಿ ಎಆಜರೆಂದು ಶಾಸನಗಳು ಸ್ಪಷ್ಟಪಡಿಸಿವ

೧ . ಶ್ರೀವಾದಿರಾಜಾಒಪರ ನಾಮದೆಯ ಶ್ರೀಮತ್ಕನಕಸೇನಪಣ್ಡತದೆವರ ಶಿಷ್ಯರೊಡೆಯ ದೇವರನಿಸಿದೆ ಶ್ರೀವಿಯಪಣ್ಡತದೆವರ

[ಹೊಂಬುಜ .೬(ಅನಗರ ೪೦) ೧೦೭೭ .ಸಾಲು :೪೩–೪೫]

೨. ವಾದಿರಾಜದೇವನ ಶಿಷ್ಯ ಶ್ರೀವಿಜಯದೆವ [ಹೊಂಬುಜ 1ಸಾಲು; ೭೭೭೮]

೩. [ಅದೇ.೨ಸಾಲು;೧೧೨–೧೩]

೪. [ಅದೇ.೩. ಸಾಲು;೧೪೮–೪೯]

ಶ್ರೀವಿಜಯದ್ಗೇವ ಒಡೆಯದೇವನಿಗೆ ಒಡೆಯದೆವನಿಗೆ ನೇರ ಗುರುಗಳು ಪುಷಸೇನ–ಸಿದ್ದಾಂತ ದೆವನೆಂದು ಶಾಸನದಲ್ಲಿ ಅಸ್ಖಲಿತವಾಗಿ ದಾಖಲಾಗಿದೆ.

ೀಪುಷ್ಯಸೇನ ಸಿದ್ದಾದೆವ ವಕ್ತ್ರನ್ದು ಸಂಗಮಾತ

ಜಾಹಾವಾಬಾತಿ ಜೈನೀಯಂ ಸರ್ವ್ವಶುಕಾಸರಸ್ವತೀ।

ನಮ್ರಾವನೀಶ ಮೌಳೀದ್ದಮಾಳಾಮಣಗಣಾರ್ಚ್ಚಿತ್ಜಂ

[ಹೊಂಬುಜ.೫(ಲನಗರ೩೯) ೧೦೭೭.ಸಾಲು :೩೭–೪೦]

ತನ್ನ ಗುರುವು ಪುಷ್ಪಸೇನಮುನಿಯೆಂದು ಗದ್ಯಚಿಂತಾಮಣಿಯಲ್ಲಿಯೂ ವಾದೀಭಸಿಂಹ ಒಡೆಯದೇವ –ಶ್ರೀವಿಜಯದೇವನು ನಿವೇದಿಸಿಯೂ ಇದ್ದಾನೆ.

ಶ್ರೀಪುಷ್ಪಸೇನ ಮುನಿನಾಥ ಇತಿಫ್ರತೀತೊದಿವ್ಯೋ
ಮನುಹೃದಿ ಸದಾಮಮ ಸಂವಿದದ್ಯಾತ ।
ಯುಚ್ಚಕ್ತಿ;ಫ್ರಕೃಅತಿ ಮೂಢ ಮತಿರ್ಜನೋಪಿ
ವಾದೀಭಸಿಂಹ ಮುನಿ ಪುಂಗವತಮುಪೈತಿ ॥
[ಗದ್ಯಚಿಂತಾಮಣಿ (ಜೀವಂದರ ಚರಿತೆ–ಗದ್ಯಕಾವ್ಯ) ಪೂರ್ವ ಪೀಠಿಕೆ]

[ಸಾರಾಂಶಸ್ವಭಾವದಿಂದ ಮೂರ್ಖನಾದ ನಾನು ವದೀಭಸಿಂಹ ಹಾಗೂ ಶ್ರೇಷವಾದ ಮುನಿಸ್ಥಾನವನ್ನು ಪಡೆದ್ದುದು ಗುರುಗಳಾದ ಶ್ರೀಪುಷ್ ಸೇನ ಮುನಿನಾಥರಶಕ್ತಿಯಿಂದ]

ಹೇಮಸೇನ ಮುನಿ ಎಂಬ ಹೆಸರೂ ಸಹ ಇದ್ದಿತೆಂಬುದನ್ನು ಇನೊಂದು ಶಾಸನ ನಿರೂಪಿಸಿದೆ;ಇದೆರ ಕೆಲವು ಅಕ್ಷರಗಳು ತ್ರುಟಿತವಾಗಿದೆ–

ಯದ್ವಿದ್ಯಾತಪಸೋ ಱಶಸ್ತ ಮುಭಯಂ ಶ್ರೀಹೇಮಸೇನೇ ಮುನೌ
ಪ್ರಾಗಾಶ್ರೀ .ಚಿರಾಭಿಯೋಗ ವಿಧಿನಾನೀತಮರಾಮುನ್ನತಿಂ ಪ್ರಾಯ
ಶ್ರೀ ವಿಜಯೇಶ ದೇವ ಸಕಲಂ ತತಾದಿಕಾಯಾಂ ಸ್ಥಿತೆ ಸಂಕ್ರಾನ್ತೇ
ಕಥಮನ್ಯಥಾ ತಿಚಿರಾಧ್ಯದಿ ..ದ್ರುಕ್ರಪ; ॥
ಶಾಸಾಂಬುದಾನಾಮುಪಸೇವಿ ... ಯಂದಾಅತುಕಾಮಂ ಯತಏವದಾತಾ

ತತೋಪಿಹಿ ಶ್ರೀ ವಿಜಯೀತಿನಾಮಾಪರೇರೇಣ ವಾಪಣತ ಪಾರಿಜಾತ;॥

ಎನಿಸಿದ ಶ್ರೀವಿಯ ಭಟ್ಟಾರಕ[ಹೊಂಬುಜ ೧ ಸಾಲು;೭೮-೭೯]

ಒಡೆಯದೇವನ ವಿಚಾರವಾಗಿ ಸಂಗತಿಗಳು ಇಷ್ಟು ನಿಚ್ಚಳ ನಿರಾಲವಾಗಿ ಶಾಸನಗಳಲ್ಲಿ ನಿರಿತವಾಗಿದ್ದರೂ

ಒಡೆಯದೇವನನ್ನು ಆತನ ಶಿಷನಾದ ಅಜಿತಸೇನನೊಂದಿಗೆ ಸಮಿಕರಿಸಿ ಅಭಿನತೆಯನ್ನು ವಿದ್ವಾಂಸರು ಕಲ್ಲಿಸಿದ್ದಕ್ಕೆ ಮುಖ್ಯ ಕಾರಣವಿದೆ; ಅದೆಂದರೆ ಅಜಿತ ಸೇನನಿಗೂ ವಾದೀಭಸಿಂಹ ಎಂಬ ಫ್ರಶಸ್ತಿಯಿತ್ತು-ವಾದಿಬಸಿಂಹ ನೆನಿಸಿದ ಅಜಿತಸೇನ ಪಂಡಿತದೀವ ಎಂಬ ಹೇಳಿಕೆ ಶಾಸನದಲ್ಲಿದೆ [ಹೊಂಬುಜ .೨.ಸಾಲು ;೧೨೨-೨೩; ಅದೆ ೩ಸಾಲು:೧೫೬-೫೭].

ಆದ್ದರಿಂದ ಗುರುಶಿಷ್ಯರಾದ ಒಡೆಯದೆವ ಮತ್ತು ಅಜಿತಸೇನರಿಗೆ (ಇಬ್ಬರಿಗೂ) ವಾದೀಬಸಿಂಹ ಎಂಬ ಫ್ರಶಸ್ತಿ ಇದ್ದರೂ ಕ್ಷತ ಚೂಡಾಮಣ ಮೂದಲಾದ ಕೃತಿಗಳ ಕರ್ತೃವು ವಾದೀಬಸಿಂಹ ಒಡೆಯದೇವನೇ ಹೂರೆತು ವಾದೇಭಸಿಂಹ ಅಜಿತಸೇನ ಅಲ್ಲ.

ಒಡೆಯದೇವನು ದಯಾಪಾಲ -ಮುನಿಯೂ ಅಭಿನ್ನರೆಂಬುದು ಸಹ ಸಾಲೆ ತೊರೆಯವರು ಮಾಡಿರುವ ತಪು ಸಮಿಕರಣ[ಸಲೊತ್ತೊರೆ ಬಿ.ಎ; ೧೯೩೮, ೫೧] ದಾಯಾಪಾಲ ಮುನಿಯು ಒಡೆಯದೇವರ ಶಿಷ್ಯರಲ್ಲಿ ಬಬ್ಬನು: ಈ ದಯಾಪಾಲ-ದೇವನು ಶಬ್ದಾನುಶಾಸನಕ್ಕೆ ಫ್ರಕ್ರಿಯೆಯೆದು ರೂಪಸಿದ್ದಿಯನ್ನು ರಚನೆ ಮಾಡಿದ್ದಾನೆ [ಹೊಂಬುಜ. ೧ಸಾಲು :೭೫-೭೬]

ಇನ್ನು ಒಡೆಯದೇವ -ವಾದೀಬಸಿಂಹನು ಯಾವ ಸ್ಥಳದಿಂದ ಬಂದವನು ಎಂಬ ವಿಚಾರ. ಇವರ ಒಡೆಯದೇವನ ಶಿಷರಲ್ಲಿ ಬಬ್ಬನು; ಈದಯಾಪಾಲ -ದೇವನು ಶಬ್ದಾಸುಶಾಸನಕ್ಕೆ ಫ್ರಕ್ರಿಯಯೆಂದು ರೂಪಸಿದ್ದಿಯನ್ನು ರಚನೆ ಮಾಡಿದ್ದಾನೆ [ಹೊಂಬುಜ. ೧. ರಾಲು ;೭೫-೭೬]

ಇನ್ನ ಒಡೆಯದೇವ –ವಾದೀಭಸಿಂಹನು ಯಾವ ಸ್ಥಳದಿಂದ ಬಂದವನು ಎಂಬ ವಿಚಾರ .ಇವರ ಒಡೆಯದೆವ ಎಂಬ ಹೆಸರಿನಿಂದ ಇವರು ತಮಿಳು ನಾಡಿನವರೆಂದು ಊಹಿಸಲು ಸಾಧ್ಯವಿದೆ [ಭುಜಬಲಿಶಾಸ್ತ್ರಿ .ಕೆ ೧೯೭೧;೧೧೯] ತೆಲುಗುದೇಶದ್ದ ಗಂಜಾಂ ಜಿಲ್ಲೆಯ ನೆರೆಯ ಫ್ದೇಶದಾಲಿ ವಾದಿಭಸಿಂಹನು ಬಾಳಿರಬೇಕೆಂಬ ಇನೊಂದು ಅಭಿಫ್ರಾಯವೂ ವ್ಯಕ್ತಪಟ್ಟಿದೆ [ಮಿರ್ಜಿಅಣ್ಣಾರಾಯ :೧೯೬೯: ೭೨೪] ತಮಿಳುನಾಡಿನ ಪೋಲೂರು ತಾಲೂಕಿನ ತಿರುಮಲೆ ಎಂಬ ಊರಿನವನೆಂದೂ ಹೇಳಿದ್ದಾರೆ [ಶ್ರೀಕಾಂತಭುಜಬಲಿ ಶಾಸ್ತ್ರಿ;೧೯೭೪;೧]

ಒಡೆಯದೇವನು ದ್ರವಿಳ ಸಂಘದ ಅರುಂಗಳ ಅನ್ವಯಕ್ಕೆ ಸೇರಿದವನೆಂಬುದರಿಂದ ಈತನು ತಮಿಳು ನಾಡಿನ ಕಡೆಯಿಂದ ಬಂದವನೆಂದು ತಿಳಿಯಲಡ್ಡಿಯಿಲ್ಲ. ಅಲಾದೆ ಶ್ರೀಮತೆ ತಿಯಂಗುಡಿಯ ನಿಡುಂಬಱ ತೀರ್ತದ ಅರುಂಗಳ ಅನ್ವಯಕ್ಕೆ ಸೇರಿದ್ವರೆಂಬ ನಿರ್ದಿಷ್ಟ ಸೂಚನೆಯು [ಹೊಂಬುಜ. ೧, ೧ ಸಾಲು:೬೭] ತಮಿಳುನಾಡಿನ ಮೂಲವನ್ನು ನಿಕರವಾಗಿಸುತ್ತೆದೆ. ಶ್ರೀನೆಡುಭೋಱಿಯ ಪಾನದಭಟಾರನೋರ್ನ್ನು ಮುಡಿಪ್ಪಿದಾರ್ [ಎ.ಕ.೧೧ (೯) ೧೦ನೆಯ ಶ.೭] ಎಂಬೆಇನೊಂದುಶಾಸನ ಫ್ರಯೋಗದ್ಲ್ಲಿರುವ ನೆಡುಭೋಱಿ ಮತ್ತು ಹೊಂಬುಜ ಶಾಸನೋಕ್ತ ನಿಡುಂಬಱ ಒಂದೇ ಇರಬಹುದು.

ತಮಿಳುನಾಡಿನಿಂದ ಒಡೆಯದೇವನು ಹೊಂಬುಜಕ್ಕೆ ಬರಲು ಕಾಟಣವೂ ಇದೆ. ತನ್ನಗಂಡನು ಸತ್ತಮೇಲೆ ಚ್ಟ್ಟಲದೇವಿಯು ತಮಿಳು ನಾಡಿನ ಕಂಚಿಯಿಂದ ಹೊಂಬುಜಕ್ಕೆ ಬಂದ ಸಂಗತಿಯನ್ನಿ ನೆನೆಯಬೇಕು. ತಮಿಳು ನಾಡಿನಲ್ಲಿ ಕೆಲವು ಕಾಲಚಟಲದೆವಿಯು ಇದ್ದಾಗ ಅಲ್ಲಿ ಪರಿಚಯವಾಗಿದ್ದ ಜೈನ ಮುನಿಗಳು ಕೆಲವರು ಆಕೆಯ ಅರಿಕೆಯಂತೆ ಸಾಂತರ ನಲೆವೀಡಾದ ಪೊಂಬುಚ್ಚಪುರಕ್ಕೊ ಬಂದರು .ಹಾಗೆ ಬಂದರು. ಹಾಗೆ ಬಂದ ಗಣ್ಯರಲ್ಲಿ ಒಡೆಯದೆವನೂ ಬಬ್ಬನೆಂಬುದು ಸಕಾರಣವಾಗಿದೆ.

ಒಡೆಯದೇವನ ಕಾಲ ಹತ್ತನೆಯ ಶತಮಾನವೆಂದೂ [ಕುಪುಸ್ವಾಮಿ ಶಾಸ್ತ್ರಿಟಿ.ಸಿ, ಶ್ರೀಕಂಠಶಾಸ್ತ್ರಿ ,ಎಸ, ಪಂಡಿತನಾಥ ರಾಮಘೇಮಿ] ಹನೊಂದನೆಯ ಶತಮಾನವೆಂದೂ[ಭುಜಬಲಿಶಾಸ್ತ್ರಿ ಕೆ ಪಂಡಿತ ದರಬಾರಿಲಾಲ ಕೋಠಯಾ] ಭಿನ್ನ ಸೂಚನೆಗಳಿವೆ. ಹೊಂಬುಜದ ಶಾಸನಗಳ ಆಧಾರದಿಂದ ಈತನ ಕಾಲವನ್ನು ಖಚಿತವಾಗಿಯೇ ಹೇಳಲು ಸಾಧ್ಯವಿದೆ. ಒಡೆಯದೇವನು ಜಹದೇಕಮಲ್ಲ ವಾದಿರಾಜ ದೇವನ ಶಿಷ್ಯನು. ಪಾರ್ಶ್ವನಾಥ ಚರಿತೆ, ಯಶೋಧರ ಚರಿತೆ ಮೊದಲಾದ ಕಾವ್ಯಗಳ ಕರ್ತೃವೂ, ನಾಗವರ್ಮ ದುರ್ಗಸಿಂಹ–ಶಾತಿನಾಥ ಮೊದಲಾದ ಕವಿಗಳ ಗುರುವೂ,ಚಾಳುಕ್ಯ ಚಕ್ರಿ ಜಗದೇಕಮಲ್ಲಜಯಸಿಂಹನಿಗೆ [೧೦೧೬–೪೨] ರಾಜಗುರುವೂ ಆದವಾದಿರಾಜರ ಕಾಲ ಕ್ರಿ.ಶ೧೦೦೦–ದಿಂದ ೧೦೪೦. ಅದರಿಂದ ಅವರ ಶಿಷ್ಯನಾದ ಒಡೆಯದೇವ (ಶ್ರೀವಿಜಯಭಟ್ಟಾರಕ–ವಾದೀಭಸಿಂಹ) ನೂ ಚಟ್ಟಲದೆವಿಯೂ ಮತ್ತು ಅಕೆಯ ತಂಗಿ ಕಂಚಲದೇವಿ(ಬೀರಲದೇವಿ) ಯನಾಲ್ವರು ಮಕ್ಕಳೂ ಈ ಮುನಿಗೆ ಶಿಷ್ಯರಾಗಿದ್ದರು. ಚಟ್ಟದೇವಿ ಹೊಂಬುಜದಲ್ಲಿಪಂಚಕೂಟ ಬಸದಿಯನ್ನು ಮಾಡಿಸಿದು ಈಮುನಿಯ ಆದೇಶದಿಂದ .ಪಂಚಕೂಟಬಸದಿಯ ಶ್ರೀವಿಜಯಭಟಾರಕನು ನಿಧಾನನಾಗಿದ್ದಿದರಿಂದ ಈತನ ಶಿಷ್ಯರಾದ ಶ್ರೆಯಾಂಸ ಪಂಡಿತನಿಂದ ಕೆಸರು ಕಲ್ಲು ಇಡಿಸಿದರು; 'ಒಡೆಯದೇವರೆನಿಸಿದೆ ಶ್ರೀವಿಜಯಪಪಣ್ಡತ ದೆವರ ಅನ್ತೇವಾಸಿಗಳಪ್ಪ ಶ್ರೀಮತ್ಕುಮಲಭದ್ರ ಪಣ್ಡತ' [ಹೊಂಬುಜ. ೧ಸಾಲು.೪೩–೪೫] ನ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಮಾ ಸಮ್ಮನ್ದಿಯ ಸಮುದಾಯ ಮುಖ್ಯವಾಗೆಮಾಡಿಕೊಟ್ಟ ಗ್ರಾಮಂಗಳನೂ ಶಾಸನ ಹೇಳಿದೆ[ಹೊಂಬುಜ ೧.ಸಾಲು :೮೨] ಅದರಿಂದ ಒಡೆಯದೇವ (ಶ್ರೀವಿಜಯಪಂಡಿತದೇವ –ವಾದೀಭಸಿಂಹ)ನು ಕ್ರಿ.ಶ.೧೦೭೭ರ ವೇಳೆಗೆ ನಿಧಾನನಾಗಿದ್ದನೆಂದು ತಿಳ್ಳಿದು ಬರುತ್ತದೆ. ಈತನು ಹೊಂಬುಜದ್ಧಾಲ್ಲಿದ್ದು ಕೃಅತಿಗಖನ್ನು ರಚಿಸಿದ ಕಾಲಾವಧಿಯನ್ನು ಕ್ರಿ.ಶ,೧೦೨೦ರಿಂದ ೧೦೭೦ ಎಂದು ಖಷಹವಾಗಿ ಹೇಳ್ಬಹುದು.